**ಇಂದು ದಿನಾಂಕ 04.08.2025 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**2.** ಮುನಿನರಸಪ್ಪನಿಗೆ 5 ಜನ ಗಂಡು ಮಕ್ಕಳು ಎಂದರೆ ಸರಿಯಲ್ಲ. ಒಟ್ಟು 7 ಜನ ಮಕ್ಕಳು ಎನ್ನುತ್ತಾರೆ. ಈಗ ಚಿಕ್ಕಆಂಜಿನಪ್ಪ, ಮುನಿಯಪ್ಪ, ಚಿಕ್ಕಣ್ಣ, ಕಾಳಪ್ಪ, ಪೂಜಪ್ಪ, ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಚಿಕ್ಕಆಂಜಿನಪ್ಪ, ಚಿಕ್ಕಣ್ಣ, ಕಾಳಪ್ಪ, ಮುನಿಯಪ್ಪ, ಪೂಜಪ್ಪರವರ ಅಪ್ಪನ ಹೆಸರು ಮುನಿನರಸಪ್ಪ. ಚಿಕ್ಕಆಂಜಿನಪ್ಪನಿಗೆ ರಾಮಾಂಜಿನಪ್ಪ ಮತ್ತು ರಾಮಪ್ಪ ಎಂದು ಇಬ್ಬರು ಮಕ್ಕಳು ಎಂದರೆ ಗೊತ್ತಿಲ್ಲ. ಅವರು ಮೃತರಾದ ನಂತರ ಅವರಿಗೆ ರಾಮು, ಮೂರ್ತಿ, ಲಕ್ಷ್ಮಮ್ಮ ಮತ್ತು ನಾರಾಯಣಪ್ಪ ಎಂದು ಮಕ್ಕಳು ಎಂದರೆ ಗೊತ್ತಿಲ್ಲ. ಚಿಕ್ಕಣ್ಣನಿಗೆ 1 ರಿಂದ 3 ನೇ ವಾದಿಯರು ಮಕ್ಕಳು ಎಂದರೆ ಗೊತ್ತಿಲ್ಲ. ಕಾಳಪ್ಪನಿಗೆ ಆಂಜಿನಮ್ಮ ಒಬ್ಬಳೇ ಮಗಳು ಎಂದರೆ ಗೊತ್ತಿಲ್ಲ. ಮುನಿಯಪ್ಪನಿಗೆ 4 ಜನ ಮಕ್ಕಳು ಎಂದರೆ ಗೊತ್ತಿಲ್ಲ. ಪೂಜಮ್ಮನಿಗೆ 6 ಜನ ಮಕ್ಕಳು ಎಂದರೆ ಗೊತ್ತಿಲ್ಲ. ವಾದಿ, 1 ರಿಂದ 6 ನೇ ಪ್ರತಿವಾದಿಯರು ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂಬ ಪ್ರಶ್ನೆಯನ್ನು ಕೇಳಿದ್ದು ಅದು ಅಸಮಂಜಸ ಆದ ಕಾರಣ ತಿರಸ್ಕರಿಸಲಾಗಿದೆ. ನಿಡಿ-7 ರಲ್ಲಿ ಆದಿ ದ್ರಾವೀಡ ಕರ್ನಾಟಕ ಎಂದು ಬರೆದಿದೆ ಎಂದರೆ ಅದರಲ್ಲಿ ಬರೆದಿರುವುದು ತಪ್ಪು ನಾವು ಆದಿ ಕರ್ನಾಟಕ ಎಂದು ತಿದ್ದುಪಡಿ ಮಾಡಿಸಿದ್ದೇವೆ. **ತಿದ್ದುಪಡಿ ಮಾಡಿಸುವ ಮುನ್ನ ಆದಿ ದ್ರಾವೀಡ ಎಂದು ನನಗೆ ಪ್ರಮಾಣ ಪತ್ರವನ್ನು ಕೊಟ್ಟಿದ್ದಾರೆ ಎಂದು ಪ್ರಶ್ನೆ ಕೇಳಿ ವರ್ಗಾವಣೆ ಪ್ರಮಾಣ ಪತ್ರವನ್ನು ತೋರಿಸಿದಾಗ ಅದು ನನಗೆ ನೀಡಿದ ದಾಖಲೆ ಎಂದು ಒಪ್ಪಿಕೊಂಡಿರುತ್ತಾರೆ. ಅದನ್ನು ನಿಪಿ-29 ಎಂದು ಗುರುತಿಸಲಾಯಿತು.** ನಿಪಿ-29 ರಲ್ಲಿ ನಾನು ಆದಿ ದ್ರಾವೀಡ ಎಂದು ದಾಖಲೆ ನೀಡಿದ್ದಾರೆ ಎಂದರೆ ಅದು ತಪ್ಪಾಗಿದೆ ಎನ್ನುತ್ತಾರೆ. ನಿಪಿ-29 ನ್ನು ಬೇರೆ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ. ನಿಡಿ-7 ಮತ್ತು ನಿಪಿ-29 ಎರಡು ಒಂದೇ ಎಂದರೆ ನಿಜ. ನಿಡಿ-7 ರಲ್ಲಿ ಆದಿ ದ್ರಾವೀಡ ಕರ್ನಾಟಕ ಎಂದು ಮೂರು ಇದೆ ಎಂದರೆ ಅದು ತಪ್ಪಾಗಿದೆ ಎನ್ನುತ್ತಾರೆ. ಆಧಾರ್ ಕಾರ್ಡ್ ಮಾಡಿಸಬೇಕಾದರೆ Agreement ನ್ನು ಕೊಟ್ಟರೆ ಅದೇ ರೀತಿ ಆಧಾರ್ ಕಾರ್ಡ್ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಡಿ-6 ನ್ನು ಅದೇ ರೀತಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಯರು ಸೋಲೂರಿನಲ್ಲಿ ವಾಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ-6 ಮತ್ತು 7 ರಲ್ಲಿ ನನ್ನ ವಿಳಾಸ ಯಲಹಂಕ ಎಂದು ಇದೆ ಎಂದರೆ ನಿಜ. ನಾನು ಹುಟ್ಟಿ ಬೆಳೆದದ್ದು ಯಲಹಂಕದಲ್ಲಿ.

(ಇಬ್ಬರು ವಕೀಲರು ವಾಗ್ವಾದ ಮಾಡುತ್ತಿದ್ದ ಕಾರಣ ಪಾಟಿ ಸವಾಲನ್ನು ಮುಂದೂಡಲಾಯಿತು.)

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**